ANUBHAVS



# ಬಾಪೂರವರ ಸುನಾಮ ಇರಲು, ತ್ಸುನಾಮಿ ಏನು ಮಾಡಬಲ್ಲದು?

© Copyright 2010, Manasamarthyadata.com

manasamarthyadata.com



*-ಶ್ರೀ ವೈಭವ ದತ್ತಾತ್ರೇಯ ಕಾಂಬಳಿ, ಕಲ್ಪಕಮ್, ತಮಿಳ್ನಾಡು*

ನಮ್ಮ ಬಾಪೂ ತಮ್ಮ ಪ್ರಿಯ ಭಕ್ತರನ್ನು ದೊಡ್ಡ ದೊಡ್ಡ ರಾಕ್ಷಸೀ ಸಂಕಟಗಳಿಂದಲೂ ಕೂಡ ಹೂವಿನಂತೆ ಎತ್ತಿ ಹೊರತರುತ್ತಾರೆ ಎಂಬುದನ್ನು ನಿರೂಪಿಸುವ ಒಂದು ಪ್ರತ್ಯಕ್ಷ ಅನುಭವ ನನಗಾಯಿತು.

ಪ.ಪೂ.ಬಾಪೂರವರ ಕೃಪಾಶೀರ್ವಾದದಿಂದ ನಾನು ಬಿ.ಎ.ಆರ್.ಸಿ.ಯಲ್ಲಿ ಕೆಲಸಕ್ಕಿದ್ದೇನೆ. ನನ್ನ ಆಫೀಸ್ ತಮಿಳ್ನಾಡಿನ ಕಲ್ಪಕಮ್‌ನಲ್ಲಿದೆ. ಪ್ರತೀ ವರ್ಷ ನಾನು ಬಾಪೂರವರು ಸೂಚಿಸಿದಂತಹ ಎಲ್ಲಾ ಉತ್ಸವಗಳನ್ನು ತಪ್ಪದೇ ಆಚರಿಸುತ್ತೇನೆ. 26 ಡಿಸೆಂಬರ್ 2004ರಂದು ದತ್ತ ಜಯಂತಿಯಾದುದರಿಂದ ಅಂದು ದತ್ತ ಜಯಂತಿ ಉಪಾಸನೆಯನ್ನು ಮಾಡಲು ಆರಂಭಿಸಿದೇನು. ಒಂದು ಘಂಟೆ ಘೋರ ಕಷ್ಟೋದರಣ ಸ್ತೋತ್ರ ಮುಂದಿನ ಒಂದು ತಾಸು ಮೂಲ ಮಂತ್ರ ಹಾಗೂ ಪ್ರತಿಯೊಂದು ತಾಸು ಕಳೆದ ನಂತರ ಬಾಪೂರವರ ಆರತಿ ಈ ರೀತಿ ನನಗೆ ನಾನೇ ಕಾರ್ಯಕ್ರಮವನ್ನು ತಯಾರಿಸಿಕೊಂಡೆನು.

ಕಲ್ಪಕಮ್‌ನಲ್ಲಿ ನಾನು ಬಾಪೂವೇ ನನ್ನ ಸಂಸಾರ ಎಂಬ ಭಾವನೆಯಿಂದ ವಾಸಿಸುತ್ತಿದ್ದೇನೆ. ಬೆಳಿಗ್ಗೆ ಎಂಟು ಘಂಟೆಗೆ ಉಪಾಸನೆಯನ್ನು ಆರಂಭಿಸಿದೆನು. ಮೊದಲಿಗೆ ದತ್ತಮಾಲಾ ಮಂತ್ರದ ಪಠಣೆಯನ್ನು ಮಾಡಿದೆನು. ನಂತರ ಒಂಭತ್ತು ಘಂಟೆಗೆ ಸರಿಯಾಗಿ ಘೋರಕಷ್ಟೋದರಣ ಸ್ತೋತ್ರ ಪಠಣೆಯನ್ನು ಶುರು ಮಾಡಿದೆನು. ಆಗ ನನಗೆ ಆಕಸ್ಮಾತ್ತಾಗಿ ರಸ್ತೆಯಲ್ಲಿ ಓರ್ವ ಸ್ತ್ರೀ ವೇಗವಾಗಿ ಓಡಿ ಹೋಗುತ್ತಿರುವುದು ಕಂಡಿತು. ಆದರೆ, ನಾನದನ್ನು ದುರ್ಲಕ್ಷಿಸಿ ನನ್ನ ಸ್ತೋತ್ರ ಪಠಣೆಯನ್ನು ಮುಂದುವರಿಸಿದೆನು. ಅಷ್ಟರಲ್ಲಿ ನೀರಿನ ಒಂದು ಪ್ರಚಂಡ ತೆರೆಯು ನನ್ನ ಮನೆಯ ಬಾಗಿಲನ್ನು ಮುರಿದು ಒಳ ಹೊಕ್ಕಿತು. ಹಠತ್ತಾನೇ ಮನೆಯೊಳಗೆಲ್ಲಾ ನೀರೇ ನೀರು ತುಂಬಿಕೊಂಡಿತು. ಈ ಆಕಸ್ಮಿಕದಿಂದ ಹೆದರಿದ ನನ್ನ ಬಾಯಿಯಿಂದ ಸತತವಾಗಿ ಬಾಪೂ, ಬಾಪೂ...ಎಂದು ಜಪ ನಡೆದಿದ್ದಿತು. ಕೆಲವೇ ಸೆಕೆಂಡುಗಳಲ್ಲಿ ಗ್ಯಾಸ್‌ನ ಸಿಲಿಂಡರ್ ನೀರಿನ ಮೇಲೆ ತೇಲಾಡತೊಡಗಿತು. ನಾನು ಅಡಿಗೆಯ ಪ್ಲಾಟ್‌ಫಾರಂನ ಮೇಲೆ ನಿಂತುಕೊಂಡೇ ಅದನ್ನು ಆಫ್

ಮಾಡಿ ನಳಿಕೆಯಿಂದ ಬೇರ್ಪಡಿಸಿದೆನು. ತುಂಬಾ ಸಮಯದ ನಂತರ ನೀರು ಕೆಳಗಿಳಿಯತೊಡಗಿದಾಗ ನಾನು ಅಡಿಗೆಯ ಪ್ಲಾಟ್‌ಫಾರಂನಿಂದ ಕೆಳಗಿಳಿದೆನು.

ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡ ತ್ಸುನಾಮಿಯ ತೆರೆಯಿಂದ ಬಾಪೂ ನನ್ನನ್ನು ಹೂವಿನಂತೆ ಎತ್ತಿ ತೆಗೆದಿದ್ದರು. ಆ ಭೀಕರ ತೆರೆಗೆ ಬಾಪೂ ಭಕ್ತನಿಗೆ ಸ್ವಲ್ಪವೂ ಕೂಡಾ ಅಪಾಯವನ್ನೆಸಗುವ ಧೈರ್ಯವಾಗಲಿಲ್ಲ.

ನಿಜವಾಗಿ ನಡೆದುದಾದರೂ ಏನು ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ನಾನು ಮನೆಯಿಂದ ಹೊರಬಿದ್ದೆನು. ಆಗ ಮಾತ್ರ ನನಗೆ ಪರಿಸ್ಥಿತಿಯ ಗಂಭೀರತೆಯು ತಿಳಿದುಬಂದು ಎಲ್ಲಾ ಕಡೆ ಹಾಹಾಕಾರ ತುಂಬಿದ್ದಿತು. ಪ್ರತಿಯೊಬ್ಬ ಮನುಷ್ಯನೂ ದುಃಖದಿಂದ ಆಕ್ರೋಶ ಪಡುತ್ತಿದ್ದರು. ನನ್ನ ಮನಸ್ಸಿನೊಳಗೆ ಮಾತ್ರ ನಿರಂತರವಾಗಿ ಬಾಪೂರವರ ಜಪ ನಡೆದೇ ಇತ್ತು ಹಾಗೂ ಆ ಸಮಯದಲ್ಲಿ ನನಗೆ ಬಾಪೂರವರ ವಾಕ್ಯ ನೆನಪಾಯಿತು. ''ಕಠಿಣ ಪರಿಸ್ಥಿತಿಯಲ್ಲಿ ಅಳುವವನು ಬಾಪೂ ಭಕ್ತನಾಗಿರಲು ಸಾಧ್ಯವೇ ಇಲ್ಲ, ಪರಿಸ್ಥಿತಿಯೊಂದಿಗೆ ಹೋರಾಡುವವನೇ ನಿಜವಾದ ಬಾಪೂ ಭಕ್ತ.''

ನಾನು ಪರಿಹಾರ ಕಾರ್ಯದಲ್ಲಿ ಇತರರಿಗೆ ಸಹಾಯ ಮಾಡತೊಡಗಿದೆನು. ಅವಶೇಷಗಳಡಿಯಲ್ಲಿ ಸಿಲುಕಿ ಬಿದ್ದಂತಹ ಹೆಣಗಳನ್ನು ಇತರರ ಸಹಾಯದಿಂದ ಹೊರತೆಗೆದೆನು. ಈ ಕೆಲಸಗಳಿಗೆ ನಾನು ಪಠಿಸುತ್ತಿದ್ದ ಬಾಪೂ ನಾಮವು ನನಗೆ ಉಚಿತ ಸಾಮರ್ಥ್ಯವನ್ನು ಕೊಡುತ್ತಿದ್ದಿತು. ಸಂತ್ರಸ್ತ ಜನರಿಗೆ ಊಟ, ತಿಂಡಿಗಳನ್ನು ಹಂಚುವಾಗ ಬಾಪೂರವರು ಕಲಿಸಿದ ಶಿಸ್ತಿನಿಂದಾಗಿ ತುಂಬಾ ಉಪಕಾರವಾಯಿತು.

ನನಗೆ ಪೂರ್ವಾತಾಯಿಯವರ ಅಭಂಗದ ಒಂದು ಸಾಲು ತುಂಬಾ ಇಷ್ಟವಾಗುತ್ತದೆ. ನಾನು ಯಾವಾಗಲೂ ಅದನ್ನು ಗುಣುಗುಣಿಸುತ್ತಿರುತ್ತೇನೆ. ಆಯೀಚ್ಯಾ ಕುಶೀತ್ ಬಾಳ ಜೇ ನಿಜತ್, ತೇ ಅಸೇ ನಿಶ್ಚಿಂತ ಪೂರ್ವಾಮ್ಹಣೇ (ತಾಯಿಯ ಕಂಕುಳದಲ್ಲಿದ್ದಂತಹ ಮಗುವು ಸದಾ ನಿಶ್ಚಿಂತವಾಗಿರುತ್ತದೆ.) ಬಾಪೂ ತನ್ನ ಪ್ರತಿಯೊಬ್ಬ ಭಕ್ತನನ್ನು ಎಷ್ಟೇ ದೊಡ್ಡ ಸಂಕಟ ಸಂಭವಿಸಿದರೂ ಕೂಡಾ ಅದರಿಂದ ಹೂವಿನಂತೆ ಎತ್ತಿಕೊಳ್ಳುತ್ತಾರೆ. ಈ ತ್ಸುನಾಮಿ ಎಂಬ ರಾಕ್ಷಸ ತೆರೆಯು ಲಕ್ಷಾಂತರ ಜನರನ್ನು ಕಬಳಿಸಿದರೂ ಕೂಡಾ ಅದಕ್ಕೆ ಬಾಪೂ ಭಕ್ತನನ್ನು ನುಂಗುವ ಸಾಮಥ್ಯವಿರಲಿಲ್ಲ.ಬಾಪೂರವರ ಸೇವೆ ಮತ್ತು ಭಕ್ತಿಯನ್ನು ನಾವು ಸತತವಾಗಿ



ಮಾಡುತ್ತಿರಲೇಬೇಕು. ಅದನ್ನು ಯಾವತ್ತೂ ಕಡಿತಗೊಳಿಸಬಾರದು. ಶ್ರೀ ಸಾಯಿ ಸಚ್ಚರಿತೆಯಲ್ಲಿಯೂ ಹೇಳಲಾಗಿದೆ.

ಅವಘಡ ಪ್ರಸಂಗ ಯೇತಾ।

ಕಾಮೀ ಪಡೇನಾ ಏಕಹೀ ಗ್ರಾಮಸ್ಥಾ।

ತಯಾಂಚಾ ತೋ ಚಾಲತಾ ಬೋಲತಾ ಧಾವತಾ।

ಸಂಕಟೀ ಪಾವತಾ ಏಕ ಸಾಯಿ ॥113॥ (ಅಧ್ಯಾಯ 11)

ಪರಮಪೂಜ್ಯ ಶ್ರೀ ಅನಿರುದ್ಧ ಬಾಪೂರವರೇ ನನ್ನ

ಸಾಯಿನಾಥ

ANUBHAVS

# HARI OM

© Copyright 2010, Manasamarthyadata.com

manasamarthyadata.com